ವಿಶಾಖ ಎನ್.

# ನಾನಿ ಮಾರುಕಟ್ಟೆ ವಿಸ್ತರಣೆಯ ಹೊಸ ಪಟ್ಟು




ಮೂರು ವರ್ಷ ಕಳೆದಿದೆಯಷ್ಟೆ, 'ದಸರಾ' ತೆಲುಗು ಸಿನಿಮಾ ದೊಡ್ಡ ಹಿಟ್ ಆಗಿ. ನಿರ್ದೇಶಕ ಶ್ರೀಕಾಂತ್ ಓದೇಲ ಅವರಿಗೆ ಸ್ವತಂತ್ರ ನಿರ್ದೇಶಕರಾಗಿ ಅದು ಚೊಚ್ಚಲ ಸಿನಿಮಾ ಆಗಿತ್ತು. ಬರೀ ಆರು ದಿನಗಳಲ್ಲಿ ₹100 ಕೋಟಿ ಕ್ಲಬ್ ಸೇರಿದ್ದ ಸಿನಿಮಾ ಅದು. ನಿರ್ಮಾಪಕ ಸುಧಾಕರ್ ಚೆರುಕೂರಿ ಖುಷಿಯಿಂದ ನಿರ್ದೇಶಕರಿಗೆ ಒಂದು ಬಿಎಂಡಬ್ಲ್ಯು ಕಾರನ್ನು ಉಡುಗೊರೆಯಾಗಿ ನೀಡಿದ್ದರು. ನ್ಯಾಚುರಲ್ ಸ್ಟಾರ್ ನಾನಿ ಅಭಿನಯದ ಸಿನಿಮಾವೊಂದು ಶತಕೋಟಿ ಗಳಿಕೆ ಮಾಡಿದ್ದು ಅದೇ ಮೊದಲು. ಈಗ ಇದೇ ತಂಡ 'ದಿ ಪ್ಯಾರಡೈಸ್' ಎಂಬ ಚಿತ್ರವನ್ನು ತೆರೆಗೆ ತರುತ್ತಿದೆ. ಇದೇ ತಿಂಗಳು ತೆರೆಕಾಣುತ್ತಿರುವ ಈ ಸಿನಿಮಾ ಬಜೆಟ್ ಕೂಡ ದೊಡ್ಡದಾಗಿದೆ. ಕಾಣುವ ಕನಸೂ ವಿಸ್ತಾರಗೊಂಡಿರುವುದು ವಿಶೇಷ. 'ದಸರಾ' ₹65 ಕೋಟಿ ಬಜೆಟ್‌ನಲ್ಲಿ ತಯಾರಾಗಿತ್ತು. ಈಗ ಅದಕ್ಕೂ ಮೂರು ಪಟ್ಟು ಬಜೆಟ್ ಹೆಚ್ಚಿಸಿ 'ಪ್ಯಾರಡೈಸ್' ಸಿದ್ಧಪಡಿಸಲಾಗಿದೆ.

ಅನಿರುದ್ಧ್ ರವಿಚಂದರ್ ಸ್ವರ ಸಂಯೋಜನೆ ಮಾಡಿರುವ 'ಆಯಾ ಶೇರ್' ಎಂಬ ಹಾಡಿನಲ್ಲಿ ನಾನಿ ಹುರಿಗಟ್ಟಿದ ದೇಹ, ನೃತ್ಯದ ಝಲಕ್‌ಗಳು ಅದಾಗಲೇ ಆಯಸ್ಕಾಂತೀಯವಾಗಿವೆ. ಪ್ರತಿನಾಯಕನ ಪಾತ್ರದಲ್ಲಿ ರಾಘವ್ ಜುಯಾಲ್ ಅಭಿನಯಿಸಿರುವುದು ಉತ್ತರ ಭಾಗದ ರಾಜ್ಯಗಳ ಪ್ರೇಕ್ಷಕರನ್ನೂ ಸೆಳೆಯುವ ತಂತ್ರವಾಗಿದೆ.



ಶ್ರೀಕಾಂತ್ ಓದೇಲ

'ಕಿಲ್' ಹಿಂದಿ ಚಿತ್ರದಲ್ಲಿ ತಮ್ಮ ಅಭಿನಯ ತೀವ್ರತೆ ಪ್ರಕಟಪಡಿಸಿದ್ದ ರಾಘವ್, 'ಬ್ಯಾಡ್ಸ್ ಆಫ್ ಬಾಲಿವುಡ್' ಡ್ರಾಮಾ ಸರಣಿಯಲ್ಲೂ ಜನಪ್ರಿಯರಾಗಿದ್ದಾರೆ.

ಯುವ ಪ್ರತಿಭೆಗಳ ದಂಡೊಂದು ಸಾಂಘಿಕವಾಗಿ ಎಂತಹ ಸಿನಿಮಾ ಕಟ್ಟಬಲ್ಲದು ಎನ್ನುವುದಕ್ಕೂ ಈ ಸಿನಿಮಾ ಉದಾಹರಣೆಯಾಗಿದೆ. ರಾಘವ್ ಇದೇ ಮೊದಲ ಬಾರಿಗೆ ದಕ್ಷಿಣ ಭಾರತದ ಸಿನಿಮಾವೊಂದಕ್ಕೆ ಕಾಲಿಟ್ಟಿದ್ದಾರೆ. ಹಿಂದಿ ಚಿತ್ರರಂಗ ಹಾಗೂ ದಕ್ಷಿಣ ಭಾರತ ಚಿತ್ರರಂಗದ ನಡುವಿನ ಗೆರೆ ತೆಳುವಾಗುತ್ತಾ ಬಂದಿರುವುದಕ್ಕೂ ಇದು ಇನ್ನೊಂದು ಸಾಕ್ಷಿ.

'ದಸರಾ'ದಲ್ಲಿ ಗಣಿಗಾರಿಕೆ ವಾತಾವರಣದಲ್ಲಿನ ಕುಡುಕ ನಾಯಕನ ಪ್ರಹಸನಗಳನ್ನು ಸಾಹಸಗಾಥೆಯಂತೆ ನಿರ್ದೇಶಕ ಶ್ರೀಕಾಂತ್ ತೋರಿಸಿದ್ದರು. 'ದಿ ಪ್ಯಾರಡೈಸ್'ನಲ್ಲಿ ಅವರು 1980ರ ದಶಕದ ತೆಲಂಗಾಣದ ಕಥೆ ಕಾಣಿಸಿದ್ದಾರೆ. ಬುಡಕಟ್ಟು ಸಮುದಾಯದ ವ್ಯಕ್ತಿಯೊಬ್ಬ ತನ್ನ ಹಕ್ಕಿಗಾಗಿ ಮಾಡುವ ಹೋರಾಟವನ್ನು ಈ ಚಿತ್ರದ ವಸ್ತುವಾಗಿಸಿದ್ದಾರೆ. ಹೊಸ ಕಾಲದ ಪ್ರೇಕ್ಷಕರಿಗೆ ತಾವು ಕಂಡರಿಯದ ಪರಿಸರ ಸೃಷ್ಟಿಸಿ ಕತೆ ಹೇಳುವ ಜಾಣ ನಡೆ ಇದು. 'ನಾನಕು ಪ್ರೇಮತೋ' ಹಾಗೂ 'ರಂಗಸ್ಥಲಂ' ಸಿನಿಮಾಗಳಲ್ಲಿ ನಿರ್ದೇಶಕ ಸುಕುಮಾರ್ ಅವರ ಗರಡಿಯಲ್ಲಿ ಶ್ರೀಕಾಂತ್ ಪಳಗಿದವರು. ಹೀಗಾಗಿ ಗುರುವಿನ ಹಾದಿಯಲ್ಲೇ ಚಿತ್ರಕತೆಯ ಭಿತ್ತಿಯನ್ನು ರೂಪಿಸುತ್ತಾರೆ. ಯಶ್, ರಕ್ಷಿತ್ ಶೆಟ್ಟಿ ಅವರಂತಹ ಪ್ರತಿಭೆಗಳು ಅರ್ಧ ದಶಕ ಕಳೆದರೂ ಒಂದು ಸಿನಿಮಾ ಕೊಡಲು ಪರದಾಡುತ್ತಿರುವ ಈ ಹೊತ್ತಿನಲ್ಲಿ ನಾನಿ ಮಾರುಕಟ್ಟೆ ವಿಸ್ತರಣೆಯ ಈ ಪಟ್ಟು ಗಮನಾರ್ಹ. ■

# ಅಂಟಾರ್ಟಿಕ್‌ಗೆ ಕ್ವಾರಾನಸಿಕ್

'ವಾರಾಣಸಿ' ತೆಲುಗು ಸಿನಿಮಾ ಹಲವು ಮೊದಲುಗಳನ್ನು ತನ್ನ ಹೆಸರಿಗೆ ಬರೆದುಕೊಳ್ಳುತ್ತಿದೆ. ಅಂಟಾರ್ಟಿಕ್‌ನಲ್ಲಿ ಚಿತ್ರೀಕರಣ ನಡೆಸಲು ತಂಡ ಸಜ್ಜಾಗಿರುವುದು ಅಂತಹ ಮೊದಲುಗಳಲ್ಲಿ ಒಂದು. ಇದುವರೆಗೆ ಭಾರತದ ಯಾವ ಸಿನಿಮಾ ತಂಡವೂ ಕೊರೆಯುವ ವಾತಾವರಣದ ಹಿಮಾಚ್ಛಾದಿತ ಅಂಟಾರ್ಟಿಕ್‌ಗೆ ಹೋಗಿ ಸಿನಿಮಾ ದೃಶ್ಯಗಳ ಚಿತ್ರೀಕರಿಸುವ ಸಾಹಸ ಮಾಡಿರಲಿಲ್ಲ. ನಿರ್ದೇಶಕ ರಾಜಮೌಳಿ ಅಂತಹ ವಿಕ್ರಮಕ್ಕೆ ಮುಂದಾಗಿದ್ದಾರೆ.

1.43:1 ಐಮ್ಯಾಕ್ಸ್ ಮಾದರಿಯಲ್ಲಿ ಚಿತ್ರೀಕರಿಸುತ್ತಿರುವುದು ಭಾರತೀಯ ಸಿನಿಮಾ ಮಟ್ಟಿಗೆ ಅತ್ಯಪರೂಪ. ದೃಶ್ಯ ಹಾಗೂ ಶಬ್ದ ವೈಭವಕ್ಕೆ ಹೇಳಿಮಾಡಿಸಿದ ಮಾದರಿ ಇದು. ಪ್ರಭಾಸ್ ಹಾಗೂ ಪ್ರಿಯಾಂಕಾ ಚೋಪ್ರಾ ಅಭಿನಯದ ಈ ಚಿತ್ರಕ್ಕೆ ಎಂ.ಎಂ. ಕೀರವಾಣಿ ಸಂಗೀತವಿದೆ. ಚಿತ್ರದ ಕಥಾಹಂದರ ಏನು ಎಂಬ ಗುಟ್ಟನ್ನು ಮಾತ್ರ ರಾಜಮೌಳಿ ಇನ್ನೂ ಬಿಟ್ಟುಕೊಟ್ಟಿಲ್ಲ. ಫ್ಯಾಂಟಸಿಗೆ ಏನೇನೂ ಕೊರತೆ ಇರುವುದಿಲ್ಲ ಎಂದು ಈಗಲೇ ಹೇಳಿಬಿಡಬಹುದು. ಇನ್ನು ಆರು ತಿಂಗಳು ಚಿತ್ರೀಕರಣ. ಆಮೇಲೆ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯಲಿವೆ. ಮುಂದಿನ ವರ್ಷ ಬೇಸಿಗೆ ಹೊತ್ತಿಗೆ 'ವಾರಾಣಸಿ' ನೋಡುವ ಅವಕಾಶ ಪ್ರೇಕ್ಷಕರಿಗೆ ಸಿಗಲಿದೆ. ■

